ಓ.ಎಸ್. ನಂ.150/2021
ಪ್ರಾಸಾ : 01

ಸಾಕ್ಷಿಗೆ ಇಂದು ದಿನಾಂಕ 13/09/2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ಶ್ರೀ. ಎಸ್.ಎಲ್.ಎನ್.ವಕೀಲರಿಂದ : ಪ್ರತಿವಾದಿಗಳ ಪರವಾಗಿ :</u>**

1. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಾನು ಹಾಜರಪಡಿಸಿರುವ ನಿಪಿ-1 ರಿಂದ 12 ರವರೆಗಿನ ದಾಖಲೆಗಳಲ್ಲಿ ನಮೂದಾಗಿರುವ ಹೆಸರು ಸತ್ಯವಾಗಿರುತ್ತವೆ. ಮೂಲತಃ ಸರ್ವೆ ನಂ. 1/3 ಮತ್ತು 1/4 ರ ಆಸ್ತಿಗಳು ರೇವಪ್ಪ ತಂದೆ ನಿಂಗಪ್ಪ ಮಲಗಾರ ರವರಿಗೆ ಸೇರಿತ್ತು. ಅವರಿಗೆ ವಿಭಾಗದಲ್ಲಿ 1956 ರಲ್ಲಿ ಬಂದಿರುತ್ತವೆ. 1956 ರಲ್ಲಿ ರೇವಪ್ಪ ತಂದೆ ನಿಂಗಪ್ಪ ಮಲಗಾರ ರವರು ಅಪ್ರಾಪ್ತರಾಗಿದ್ದರು. ಆ ಕಾರಣಕ್ಕಾಗಿ ಅವರ ತಾಯಿ ಕಾಶೀಬಾಯಿ ರವರು ಅಜ್ಞಾನಪಾಲಕರ್ತೆಯಾಗಿದ್ದರು ಎಂದರೆ ಸರಿ.
2. ರೇವಪ್ಪ ತಂದೆ ನಿಂಗಪ್ಪ ಮಲಗಾರ ರವರಿಗೆ ಮೂರು ಜನ ಮಕ್ಕಳು. ಅವರುಗಳೆಂದರೆ ಸಿದ್ದಪ್ಪ, ಶಿವಯೋಗೆಪ್ಪ ಮತ್ತು ಗಜಾನನ ಆಗಿರುತ್ತಾರೆ. ಸರ್ವೆ ನಂ.1/3 ಮತ್ತು 1/4 ರ ಜಮೀನುಗಳು 5 ಮತ್ತು 3 ಎಂದು ಯಾವಾಗ ರೀಸರ್ವೆ ನಂಬರ ಆಯಿತು ಎಂದು ನನಗೆ ಗೊತ್ತಿಲ್ಲ. 1956 ರಲ್ಲಿ ರೇವಪ್ಪ ತಂದೆ ನಿಂಗಪ್ಪ ಮಲಗಾರ ರವರು ತಮ್ಮ ಪಾಲಿನ ಹಕ್ಕು ಬಿಟ್ಟು ಕೊಟ್ಟಿದ್ದಾರೆಂದು ನನ್ನ ವಾದ ಪತ್ರದಲ್ಲಿ ಬರೆಸಿರುವುದು ಸರಿ ಇರುತ್ತದೆ. ಆಸ್ತಿಯನ್ನು ರೇವಪ್ಪ ನಿಂಗಪ್ಪ ಮಲಗಾರ ರವರು ಯಾವ ದಿನಾಂಕದಂದು ಬಿಟ್ಟು ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ ಆದರೆ ರಲ್ಲಿ 'ಡ' ನಂಬರ 756 ರ ಪ್ರಕಾರ ಬಿಟ್ಟು ಕೊಟ್ಟಿರುತ್ತಾರೆ. ರೇವಪ್ಪ ರವರು ಹಕ್ಕು ಬಿಟ್ಟು ಕೊಟ್ಟ ಬಗ್ಗೆ ದಾಖಲೆಯನ್ನು ಹಾಜರಪಡಿಸಿರುತ್ತೇನೆ. ಸಬ್ ರಜಿಸ್ಟ್ರರ್ ಕಚೇರಿಯಲ್ಲಿ ಅದು ನೋಂದಣಿಯಾಗಿರುತ್ತದೆ. ಸದರಿ ನೋಂದಾಯಿತ ದಾಖಲೆಯನ್ನು ನಾನು ಹಾಜರಪಡಿಸಿರುತ್ತೇನೆ. ಯಾವುದೇ ನೋಂದಾಯಿತ ದಾಖಲೆಯಾಗಿಲ್ಲ, ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿ. ರೇವಪ್ಪ ರವರಿಗೆ ಇಬ್ಬರೇ ಮಕ್ಕಳೆಂದು ನಾನು ವಾದ ಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸಾಕ್ಷಿಯು ವಿಭಾಗ ಸಮಯದಲ್ಲಿ ಇಬ್ಬರು ಮಕ್ಕಳಿದ್ದು, ಆದರೆ ರೇವಪ್ಪ ರವರಿಗೆ ಮೂರು ಜನ ಮಕ್ಕಳೆಂದು ನುಡಿಯುತ್ತಾರೆ. ರೇವಪ್ಪರವರಿಗೆ ಸಿದ್ದಪ್ಪ ರವರು ಹಿರಿಯ ಮಗ, ಶಿವಯೋಗೆಪ್ಪ ನಡುವಿನ ಮಗ ಮತ್ತು ಗಜಾನಂದ ಕಿರಿಯ ಮಗ ಎಂದರೆ ಸರಿ. ಗಜಾನಂದನು 2006 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಗಜಾನಂದನಿಗೆ 2 ನೇ ಪ್ರತಿವಾದಿಯಾದ ಮಹಾನಂದಳು ಹೆಂಡತಿಯಾಗಬೇಕು ಎಂದರೆ ಸರಿ.
4. ಶಿವಯೋಗೆಪ್ಪ ರವರು 2011 ರಲ್ಲಿ ಮೃತಪಟ್ಟಿರುತ್ತಾರೆ. ಆತನಿಗೆ 1 ನೇ ಪ್ರತಿವಾದಿಯಾದ ಸುನೀಲ ಎಂಬ ಮಗನಿದ್ದಾನೆ ಎಂದರೆ ಸರಿ. ರೇವಪ್ಪ ರವರಿಗೆ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದವು ಎಂದರೆ ಸರಿ.
5. ನಾನು 1 ನೇ ಪ್ರತಿವಾದಿಯ ತಂದೆಯ ಉಪಚಾರ ಮಾಡಲು ಆಸ್ಪತ್ರೆಗೆ ದಾಖಲಿಸಿರುತ್ತೇನೆಂದು ನನ್ನ ವಾದ ಪತ್ರದಲ್ಲಿ ತಿಳಿಸಿದ್ದು, ಯಾವ ಯಾವ ಆಸ್ಪತ್ರೆಗೆ ದಾಖಲಿಸಿರುತ್ತೀರಿ ಮತ್ತು ಎಷ್ಟು ರಶೀದಿಗಳನ್ನು ಹಾಜರಪಡಿಸಿರುತ್ತೀರಿ ಎಂದರೆ ಸಾಕ್ಷಿಯು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ತಾನು ಹಾಜರಪಡಿಸಿರುವ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ರಶೀದಿಗಳನ್ನು ಹಾಜರಪಡಿಸಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಗಳಿಗೆ ಆಸ್ತಿಯನ್ನು ಕೊಡದೇ ಅವರ ವಿಭಾಗದ ಹಕ್ಕನ್ನು ಕಸಿಯಲು 1 ನೇ ಪ್ರತಿವಾದಿಯ ತಂದೆಯನ್ನು ಆಸ್ಪತ್ರೆಗೆ ತೋರಿಸಿ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ಧೇನೆ ಎಂದರೆ ಸರಿಯಲ್ಲ.
6. 1 ನೇ ಪ್ರತಿವಾದಿಯು ತನ್ನ ತಂದೆಯ ಆಸ್ಪತ್ರೆಯ ಖರ್ಚನ್ನು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ 1 ನೇ ಪ್ರತಿವಾದಿಯ ತಂದೆಯು ಹಕ್ಕು ಬಿಟ್ಟು ಕೊಟ್ಟ ನಿರ್ದಿಷ್ಟ ದಿನಾಂಕವನ್ನು ಬರೆಸಿರುವುದಿಲ್ಲ. ಈ ಬಗ್ಗೆ ಯಾವುದೇ ದಾಖಲೆಗಳಿಲ್ಲ, ಆದರೆ ಮೌಖಿಕ ಸಾಕ್ಷ್ಯ ಇದೆ. 1 ನೇ ಪ್ರತಿವಾದಿಯ ತಂದೆಯು ನನಗೆ ಯಾವುದೇ ಹಕ್ಕು ಬಿಟ್ಟು ಕೊಟ್ಟಿಲ್ಲ ಎಂದರೆ ಸರಿಯಲ್ಲ.
7. 2020-21 ರ ಹಿಂದಿನ ಸಾಲಿನ ಪಹಣಿಗಳನ್ನು ನೋಡಿರುತ್ತೇನೆ. 2011 ರಿಂದ 2020 ರವರೆಗೆ ಉತಾರೆಯಲ್ಲಿ ನನ್ನ, ಪ್ರತಿವಾದಿಗಳ ಹೆಸರು ದಾಖಲಾಗಿತ್ತು ಎಂದರೆ ಸರಿ. 2011 ರಿಂದ ಯಾಕೆ ನೀವು ದಾವೆ ದಾಖಲಿಸಲಿಲ್ಲ ಎಂದರೆ ಸಾಕ್ಷಿಯು ಯಾವುದೇ

ತಕರಾರು ಇರಲಿಲ್ಲ, ಪ್ರತಿವಾದಿಗಳು ತಕರಾರು ಮಾಡಿದಾಗ ದಾವಾ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಘೋಷಣಾತ್ಮಕ ಪರಿಹಾರ ಕೋರಿ ಕಾಲಮಿತಿಯಲ್ಲಿ ದಾವಾ ದಾಖಲಿಸಿದೇ ಇರುವ ಕಾರಣ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. 2011 ರಿಂದಲೂ 2 ನೇ ಪ್ರತಿವಾದಿಯು ದಾವಾ ಜಮೀನಿನಲ್ಲಿ ಫ್ಲೋರ್ ಮಿಲ್ ನ್ನು ಇಟ್ಟುಕೊಂಡು ಸ್ವಾಧೀನಾನುಭವದಲ್ಲಿದ್ದಾಳೆ ಎಂದರೆ ಸರಿ. ಆಕೆಯ ಗಂಡನಾದ ಗಜಾನಂದನು ಸಹ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಆತನು ಮೃತನಾಗುವದಕ್ಕಿಂತಲೂ ಮುಂಚಿನಿಂದಲೂ ಸ್ವಾಧೀನಾನುಭವ ಹೊಂದಿದ್ದನು ಎಂದರೆ ಸರಿ. ಸಾಕ್ಷಿ ಮುಂದುವರೆದು ಫ್ಲೋರ್ ಮಿಲ್ ಈಗ ಅಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಕೆ.ಪಿ.ಟಿ.ಸಿ.ಎಲ್. ವಿದ್ಯುಚ್ಛಕ್ತಿ ಸಂಪರ್ಕವನ್ನು ಫ್ಲೋರ್ ಮಿಲ್ ಗೆ ನೀಡಿದ್ದು, ಆಕೆಯು ಅದರಿಂದಲೇ ಜೀವನ ಸಾಗಿಸುತ್ತಾಳೆ ಎಂದರೆ ಸಾಕ್ಷಿಯು ಯಾವುದೇ ಪರವಾನಿಗೆ ಪಡೆಯದೇ ವಿದ್ಯುಚ್ಛಕ್ತಿ ಸಂಪರ್ಕ ಪಡೆದುಕೊಂಡು ಫ್ಲೋರ್ ಮಿಲ್ ನಡೆಸುತ್ತಿದ್ದ ಕಾರಣ ಸಂಬಂಧಪಟ್ಟ ಅಧಿಕಾರಿಗಳು ವಿದ್ಯುಚ್ಛಕ್ತಿ ಸಂಪರ್ಕ ಕಡಿತಗೊಳಿಸಿರುತ್ತಾರೆ ಎಂದು ನುಡಿಯುತ್ತಾರೆ.

8. 1 ನೇ ಪ್ರತಿವಾದಿ ತನ್ನ ತಂದೆ ಮೃತರಾದ ನಂತರ ತನ್ನ ಭಾಗದ ಆಸ್ತಿಯನ್ನು ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಮೃತರಾದಾಗಿನಿಂದಲೂ ನಾನೇ ಸ್ವಾಧೀನಾನುಭವ ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ಮಹಿಳೆಯಾಗಿದ್ದು ಮತ್ತು 1 ನೇ ಪ್ರತಿವಾದಿಯು ಮುಗ್ಧನಾಗಿದ್ದು, ಅದರ ಗೈರು ಪಾಯಿದೆ ಪಡೆದು ಸುಳ್ಳು ದಾವಾ ದಾಖಲಿಸಿ, ಆಸ್ತಿ ಎತ್ತಿಹಾಕಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಾನು ಹಣ್ಣಿನ ಗಿಡಗಳನ್ನು ಪ್ರತಿವಾದಿಗಳು ಹಾಳು ಮಾಡುತ್ತಿದ್ದಾರೆಂದು ವಾದಿಸಿದ್ದು, ಸದರಿ ಹಣ್ಣಿನ ಗಿಡಗಳನ್ನು ಖರೀದಿಸಿರುವ ಬಗ್ಗೆ ರಶೀದಿಗಳನ್ನು ಹಾಜರಪಡಿಸುತ್ತೀರಾ ಎಂದರೆ ಸಾಕ್ಷಿಯು ಹಾಜರಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ತಾನು ಹಾಜರಪಡಿಸಿರುವ ದಾಖಲೆಗಳನ್ನು ನೋಡಿ ಹಾಜರಪಡಿಸಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಭಾವಚಿತ್ರವನ್ನು ಹಾಜರಪಡಿಸಿದ್ದೇನೆ ಎಂದು ನುಡಿಯುತ್ತಾರೆ.

10. ನಿಪಿ-14 ಎಂ.ಆರ್.ನಂ. 9/2006-07 ರ ದಾಖಲೆಯನ್ನು ನಾನು ಹಾಜರಪಡಿಸಿರುವುದಿಲ್ಲ. ಎಂ.ಆರ್.ನಂ.129/2011-12 ರ ದಾಖಲೆಯನ್ನು ನಾನು

ಹಾಜರಪಡಿಸಿರುತ್ತೇನೆ. 2006 ಮತ್ತು 2011 ರಲ್ಲಿ 2 ನೇ ಪ್ರತಿವಾದಿಯ ಹೆಸರನ್ನು ಖಾತೆಯಲ್ಲಿ ಸೇರಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಬೋಗಸ್ ಆಗಿದ್ದು, ನನ್ನ ತಂದೆಯವರೇ ವಿಭಾಗ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಿಪಿ-14 ಮತ್ತು ನಿಪಿ-15 ರ ದಾಖಲೆಗಳನ್ನು ನಾನು ಸಕ್ಷಮ ಪ್ರಾಧಿಕಾರದಲ್ಲಿ ಪ್ರಶ್ನಿಸಿರುವುದಿಲ್ಲ. ನನಗೆ 2006 ಮತ್ತು 2011 ರ ದಾಖಲೆಗಳನ್ನು ಈ ಮೊದಲೇ ಗೊತ್ತಿದ್ದರೂ ಸಹ 2021 ರಲ್ಲಿ ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನಾನು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟು, ಮುಗ್ಧರಾದ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳೂ ಸಹ ದಾವಾ ಸ್ವತ್ತಿನಲ್ಲಿ ತಲಾ 1/3 ವಿಭಾಗದ ಹಕ್ಕು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶಿವಾನಂದ ಒಬ್ಬರಿಗೆ ಹಕ್ಕು ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ನಾನು ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ದಾವಾ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ದೇವರಾಜು ಹೆಚ್.ಆರ್.)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.